ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 4, January- February 2025, Pp. 73-79
©*IIMRD*, Mysuru
www.iimrd.com

# ನಾ.ಮೊಗಸಾಲೆಯವರ ಕವಿತೆಗಳಲ್ಲಿ ಅಲ್ಲಮನ ಚಿತ್ರಣ

**ಚಂದ್ರನಾಯಕ ಪಿ. ಆರ್ ಮತ್ತು ಡಾ. ಆಶಾಕುಮಾರಿ ಬಿ.ಪಿ.**
ಸಂಶೋಧಕರು, ಪ್ರಾಧ್ಯಾಪಕರು,
ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

**ಸಾರಾಂಶ: (Abstract)**

*ಕರ್ನಾಟಕದ ಸಾಂಸ್ಕೃತಿಕ ಸಂಪತ್ತಿನ ಭಾಗವಾಗಿರುವ ವಚನ ಸಾಹಿತ್ಯದ ಅನುಭಾವಿಗಳಲ್ಲಿಯೇ ಅಪ್ರತಿಮನೆನಿಸಿಕೊಂಡ ಅಲ್ಲಮನೆಂಬ 'ಗುಹಾವಾಸಿ'ಯನ್ನು ಕೊಡುಗೆಯಾಗಿ ನೀಡಿದೆ. ಪದಕ್ಕಾಗಲಿ, ಪದಾರ್ಥಕ್ಕಾಗಲಿ ನಿಲುಕದ 'ಅಲ್ಲಮ'ನೆಂಬ ಮೇರು ವ್ಯಕ್ತಿತ್ವದ ಪ್ರಭಾವಕ್ಕೆ ಮೊಗಸಾಲೆಯವರು ಕೂಡ ಒಳಗಾಗಿದ್ದಾರೆ. ಅಲ್ಲಮನ ಅನುಭಾವಿಕ ನೆಲೆಗಳಿಗೆ ಆಕರ್ಷಿತಗೊಂಡಿರುವ ಮೊಗಸಾಲೆಯವರು 'ಭಾವುಕವಲ್ಲದ ವಿಚಾರಶೀಲ ದೃಷ್ಟಿಕೋನಗಳನ್ನು ಬಳುವಳಿಯಾಗಿ ಪಡೆದಿರುವುದು ಅಲ್ಲಮನಲ್ಲಿ. 'ಕಾಂತಾವರದ ಕಾಂತಾರ'ವೆಂದು ಪ್ರಸಿದ್ಧಗೊಂಡಿರುವ ನಾ.ಮೊಗಸಾಲೆಯವರು ಕಾಂತಾವರಲ್ಲಿ 'ಅಲ್ಲಮಪ್ರಭು ಪೀಠ'ವನ್ನು ಸ್ಥಾಪಿಸಿ ಅಮೂರ್ತದ ಅನುಭಾವಿಗೆ ಅಧ್ಯಯನಶೀಲತೆಯ ಮೂಲಕ ಮೂರ್ತಗೊಳಿಸಿದ್ದಾರೆ. ಜೊತೆಗೆ ಪೀಠಕ್ಕೆ ಪೂರಕವಾಗಿ 'ಅಲ್ಲಮ ಸಾಂಸ್ಕೃತಿಕ ಗ್ರಾಮ'ವೆನ್ನುವ ಊರನ್ನೇ ನಿರ್ಮಿಸುವ ಸಾಹಸಕ್ಕೂ ಕೂಡ ಕೈಹಾಕಿ ಯಶಸ್ವಿಯಾಗುತ್ತಿದ್ದಾರೆ.*

**ಮುಖ್ಯಪದಗಳು (Keywords):** *ವಚನ ಸಾಹಿತ್ಯ, ಗುಹಾವಾಸಿ, ಅಲ್ಲಮ, ಅಲ್ಲಮ ಸಾಂಸ್ಕೃತಿಕ ಗ್ರಾಮ, ಗುಹೇಶ್ವರ.*

**ಪೀಠಿಕೆ**

ಜ್ಞಾನದ ಮಾರ್ಗವನ್ನು ತೋರಿದ ಅಲ್ಲಮನನ್ನು 'ದ್ವೈತಾದ್ವೈತಗಳ' ಮೀರಿದ ಭಾವದಲ್ಲಿ ಮೊಗಸಾಲೆಯವರು ಒಡಮೂಡಿಸಿದ್ದಾರೆ. ಲೋಕವನ್ನು ಗ್ರಹಿಸಲು, ವಸ್ತು ಸ್ವಭಾವ ಅಥವಾ ಸತ್ಯವನ್ನು ತಿಳಿಯಲು ಭಾರತೀಯ ತತ್ವಶಾಸ್ತ್ರವು ಆರು ಪ್ರಮಾಣಗಳನ್ನು ನಿರೂಪಿಸಿದೆ. ಇಂತಹ ಪ್ರಮಾಣಗಳನ್ನು ಅಲ್ಲಮನು ನಿರಾಕರಿಸಿ 'ಗುಹೇಶ್ವರನೆಂಬುದು ಅಪ್ರಮಾಣ'ವೆಂದು ಹೇಳುತ್ತಾನೆ. ಈ ಹಿನ್ನೆಲೆಯಲ್ಲಿ ಮೊಗಸಾಲೆ ಅವರು ರಚಿಸಿರುವ 'ಗುಹೇಶ್ವರನಲ್ಲಿ ಇಲ್ಲದ್ದು' ಎನ್ನುವ ಕವಿತೆ 'ಗುಹೇಶ್ವರ' ಎಂಬ ಪರಿಕಲ್ಪನೆಯ ವಿವೇಚನೆಗೆ ತೊಡಗುತ್ತದೆ.

*Please cite this article as:* ಚಂದ್ರನಾಯಕ ಪಿ. ಆರ್ ಮತ್ತು ಆಶಾಕುಮಾರಿ ಬಿ.ಪಿ. (2025). ನಾ.ಮೊಗಸಾಲೆಯವರ ಕವಿತೆಗಳಲ್ಲಿ ಅಲ್ಲಮನ ಚಿತ್ರಣ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(4). ಪು.ಸಂ.* 73–79

*"ಗುಹೇಶ್ವರನಲ್ಲಿ ಇಲ್ಲದ್ದು*
*ಇದೆ ಎಂಬಂತೆ ಪ್ರತಿ ಕಡೆಯಲ್ಲೂ*
*.....*
*ಆಕಾಶವನ್ನು ದಿಟ್ಟಿಸಿ ನೋಡಿ*
*ಅಲ್ಲಿ ಕಾಣುವುದು ಮತ್ತು ಕಾಣದಿರುವುದು*
*ಇರುವುದು ನಿಮ್ಮೊಳಗೇ!"[1]*

"ಗುಹೇಶ್ವರ ಎಂದರೆ ಸತ್ಯ, ಅರಿವು ಎಂದೇ ಅರ್ಥ. ಒಂದೊಂದು ಪ್ರಮಾಣವೂ ಇನ್ನೊಂದು ಪ್ರಮಾಣದಿಂದ ಸಿದ್ಧವಾಗುತ್ತದೆ. ಆದುದರಿಂದಲೇ ಪ್ರಮಾಣ ಎಂಬುದು ಅಪ್ರಮಾಣ. ಪ್ರಮಾಣಗಳನ್ನು ಮೀರುವುದೆಂದರೆ ಕಾಲ, ದೇಶ ಮತ್ತು ನಾಮಗಳನ್ನು ಮೀರುವುದು, ಅಂದರೆ 'ನಿತ್ಯ ಎಚ್ಚರದ ಸ್ಥಿತಿ'. ಪ್ರತಿಕ್ಷಣವೂ ಜೀವಿಸುವುದು ಆ ಮೂಲಕ ಸತ್ಯವನ್ನು ಕಾಣುವುದಲ್ಲ, ಸತ್ಯವನ್ನು ಕಟ್ಟುವುದು, ಮುಟ್ಟುವುದು."[2] ಉಳಿಪೆಟ್ಟುಗಳ ತಿಂದು ದೇವಾದಿದೇವತೆಗಳಾದ ಕಲ್ಲಿಗೆ ದೈವರೂಪ ಬಂದದ್ದು ನೋಡುವ ಕಂಗಳಿಂದ. ದೀಪದೊಳಗಿನ ದೀಪದ ಗುಣವನ್ನು ಕಂಡುಕೊಂಡಿದ್ದು ಕೂಡ ನಾವೇ ಅಲ್ಲವೇ, ಹಾಗೆಯೇ ಅರಿವನ್ನು ನಾವೇ ಅರಿತುಕೊಳ್ಳಬೇಕೆಂಬ ದಾರ್ಶನಿಕತೆಯ ವಿವೇಚನೆ ಈ ಕವಿತೆಯಲ್ಲಿದೆ. ಗುಹೇಶ್ವರ ನಮ್ಮೊಳಗಿನ ಎನ್ನುವ ಅಂಕಿತವು 'ಅಂತರಂಗದ ಗುಹೆಯ ಆಳದಲ್ಲಿರುವ ಅರಿವ'ನ್ನು ಸೂಚಿಸುತ್ತದೆ ಎಂದು ಓ.ಎಲ್.ನಾಗಭೂಷಣಸ್ವಾಮಿಯವರು ವಿವರಿಸಿದ್ದಾರೆ.[3] ದೇವರನ್ನು ಸಾಂಸ್ಥಿಕ ಧರ್ಮದಲ್ಲಿ, ಸ್ಥಾವರದಲ್ಲಿ ಹುಡುಕದೆ ತಮ್ಮೊಳಗಿನ ಅರಿವಿನ ಮೂಲಕ ದೇವರನ್ನು ಕಾಣುವ ಅಲ್ಲಮ ತಾತ್ವಿಕ ಚಿಂತನೆಗಳ ಪ್ರಭಾವವು ಮೊಗಸಾಲೆಯವರ ಕಾವ್ಯ ಅನುಭಾವದೆಡೆಗೆ ಚಲಿಸುವಂತೆ ಮಾಡಿದೆ.

*"ಎಲ್ಲವನ್ನೂ ನಿರಾಕರಿಸುತ್ತಲೇ ಬಂದ*
*ಅಲ್ಲಮನನ್ನು*
*ಹುಡುಕ ಬಯಸಿದೆ ಕಣ್ಣುನೆಟ್ಟು*
*ಮಿಂಚನ್ನು ಮಿಂಚಿನಲ್ಲಿ*
*ನೀರನ್ನು ನೀರಿನಲ್ಲಿ*
*ಹುಡುಕಿ!"* [4]

ಮೊಗಸಾಲೆಯವರು ಅಕ್ಷರಗಳ ಮೂಲಕ ಅಲ್ಲಮನನ್ನು ಚಿತ್ರಿಸುವ ಅಸಾಧ್ಯಕ್ಕೆ ಪ್ರಯತ್ನಿಸಿದ್ದಾರೆ. ಆದರೆ ಮಿಂಚಲ್ಲಿ ಮಿಂಚನ್ನು, ನೀರಲ್ಲಿ ನೀರನ್ನು ಹುಡುಕಿ ಹಿಡಿಯಲಾಗದ ಮೂರ್ತರಹಿತವಾದ ಸ್ಥಿತಿಯನ್ನು ಅಲ್ಲಮನ ವ್ಯಕ್ತಿತ್ವಕ್ಕೆ ಕವಿ ಸಮೀಕರಿಸಿದ್ದಾರೆ. 'ಎಲ್ಲವನ್ನೂ ನಿರಾಕರಿಸುವ' ಅದ್ವಯವಾದಿ ಅಲ್ಲಮನನ್ನು

---

[1]. ಮೊಗಸಾಲೆ, ನಾ. *ನೀಲ ಆಕಾಶ.* ಪುಟ–623
[2]. ಖಂಡಿಗೆ, ಟಿ.ಎ.ಎನ್. (ಲೇ.) ಹೆಗಡೆ, ಜಿ.ಎಂ. (ಸಂ.). *ಅಲ್ಲಮ ಅಧ್ಯಯನ ಲೋಕ.* ಪುಟ–684
[3]. ನಾಗಭೂಷಣಸ್ವಾಮಿ, ಓ.ಎಲ್.ಎನ್. *ವಚನ ಪ್ರಶ್ನೋತ್ತರ.* ಪುಟ–30
4. ಮೊಗಸಾಲೆ, ನಾ. *ನೀಲ ಆಕಾಶ.* ಪುಟ–628

ಚಿತ್ರಿಸುವ ಆಶಯ ಕವಿಯದ್ದಾಗಿದೆ. ಹಾಗಾದರೆ ಅಲ್ಲಮನು ಏನೆಲ್ಲವನ್ನೂ ನಿರಾಕರಿಸಿರಬಹುದೆಂಬುದನ್ನು ತಿಳಿದರೆ ಮಾತ್ರ ಅಲ್ಲಮನ ಪ್ರತಿಭೆಯನ್ನು ಗುರುತಿಸಲು ಸಾಧ್ಯ.

'ಕ್ಷಣಿಕವಾದ ಮನುಷ್ಯ ಭೋಗತನವನ್ನು, ದ್ವೈತ ಸ್ವರೂಪದ ಭಕ್ತಿಯನ್ನ, ಪುರೋಹಿತಶಾಹಿಯ ಧಾರ್ಮಿಕ ಶೋಷಣೆಯನ್ನ, ಧಾರ್ಮಿಕ ಮನುಷ್ಯನ ಅಸ್ತಿತ್ವವನ್ನ, ಧಾರ್ಮಿಕ ಅನುಭವದ ಆಚರಣೆಯಲ್ಲಿರುವ ಭಾವನಾತ್ಮಕತೆಯನ್ನು ಅಲ್ಲಮನು ತಿರಸ್ಕರಿಸಿದ್ದಾನೆ ಎಂದು ಬಸವರಾಜು ಕಲ್ಗುಡಿ ಅವರು ವಿಶ್ಲೇಷಿಸಿದ್ದಾರೆ. ಅಲ್ಲಮನು ಈ ನಿರಾಕರಣೆಯ ಅಂಶಗಳೇ ಮೊಗಸಾಲೆಯವರು 'ಅಲ್ಲಮನಿ'ಗೆ ಪ್ರಭಾವಿತನಾಗಲು ಕಾರಣೀಭೂತವಾಗಿವೆ. 'ಮೋಕ್ಷ ಇದೆ ಅಕ್ಷರಗಳಲ್ಲಿ ಎಂದುಕೊಂಡೆ, ಬಯಲಿಗೆ ಬೆಟ್ಟವೇ ಗುರಿ ಎಂಬಂತೆ' ಎನ್ನುವ ಸಾಲು ಮೊಗಸಾಲೆ ಅವರು 'ಬಯಲಿನ ಪರಿಕಲ್ಪನೆ'ಯನ್ನು ಅಲ್ಲಮನಿಂದ ಪ್ರೇರಪಿತಗೊಂಡು ರೂಪಿಸಿರುವುದಕ್ಕೆ ಸಾಕ್ಷಿಯಾಗಿದೆ. ತಮ್ಮ ಆತ್ಮಕಥೆಯನ್ನು 'ಬಯಲು ಬೆಟ್ಟ'ವೆಂದು ಕರೆದುಕೊಂಡಿರುವ ಮೊಗಸಾಲೆಯವರು 'ಬಯಲಿನ' ಮೂಲಕವೇ ಬೆಟ್ಟ ಕಟ್ಟುವ ಕನಸುಗಾರಿಕೆಯನ್ನು ಕವಿತೆಗಳಲ್ಲಿ ನಿರೂಪಿಸಿದ್ದಾರೆ. ಕವಿ ಅಲ್ಲಮನನ್ನು ಹುಡುಕುತ್ತಿರುವುದು ಕೂಡ ಬಯಲಿನಲ್ಲಿ, ಹಾಗೂ ಕವಿ ಬೆಟ್ಟವನ್ನು ಕಟ್ಟಬೇಕಾಗಿರುವುದು ಕೂಡ ಬಯಲಿನಲ್ಲಿಯೇ ಹಾಗಾಗಿ ಅರಿವನ್ನು ಶೋಧಿಸುವ ಬೆಳಕಿನ ಪ್ರತಿಮೆಯಾಗಿ ಅಲ್ಲಮನನ್ನು ಕಂಡರಿಸಲಾಗಿದೆ. 'ಗುಹೇಶ್ವರ' ಎನ್ನುವ ಅಂಕಿತದ ಸಾಂಕೇತವನ್ನು ಆಧ್ಯಾತ್ಮಿಕ ಒಂಟಿತನವೆಂದು ಕರೆದಿರುವ ಬಸವರಾಜ ಕಲ್ಗುಡಿ ಅವರ ಮಾತುಗಳನ್ನು ಇಲ್ಲಿ ಸಾಂದರ್ಭಿಕವಾಗಿ ಸ್ಮರಿಸಿಕೊಳ್ಳಬಹುದು. "ಅಲ್ಲಮನಲ್ಲಿ ಮುಖ್ಯವಾಗಿ ವ್ಯಕ್ತವಾಗುವುದು ಸಂಪೂರ್ಣವಾಗಿ ಭೌತಿಕ ನೆಲಗಳಿಂದಲೇ ಪ್ರತ್ಯೇಕ ಹೊಂದುವ ಮಾನವನ ಅಸ್ತಿತ್ವ, ಮಾನವನು ತನ್ನನ್ನು ತಾನು ಅರ್ಥಪೂರ್ಣವಾಗಿ ಕಂಡುಕೊಳ್ಳುವುದು, ಈ ನೆಲೆಯಲ್ಲಿಯೇ ಎನ್ನುವುದು ಇವನ ನಂಬಿಕೆಯೂ ಆಗಿದೆ. ಸಮಾಜ ಮತ್ತು ಮನುಷ್ಯನ ಸಂಬಂಧಗಳಲ್ಲಿ ಅಲ್ಲಮನ ಮನುಷ್ಯನನ್ನು ಕುರಿತ ಯೋಚನೆಯನ್ನು ಗಮನಿಸಿದರೆ, ಸ್ಪಷ್ಟವಾಗಿ ಗೊತ್ತಾಗುವ ವಿಚಾರ ಇಲ್ಲಿಯ ಮನುಷ್ಯ ಸಮಾಜದ ಎಲ್ಲ ವಲಯಗಳಿಂದಲೂ ಮುಕ್ತನಾಗಬೇಕೆನ್ನುವವನು. ಅಂದರೆ, ಇಲ್ಲಿಯ ಧಾರ್ಮಿಕ ಮನುಷ್ಯ ಒಂಟಿ. ಈ ಆಧ್ಯಾತ್ಮಿಕ ಒಂಟಿತನ ಹಾಗೂ ಈ ವಾತಾವರಣದಲ್ಲಿ ಸಾಧಿಸಲಾಗುವ ಅನುಭಾವದ ನೆಲೆಗಳು ಮಾತ್ರ ಅಥೆಂಟಿಕ್ ಆದಂತವುಗಳು. ಹೀಗಾಗಿ ಇಲ್ಲಿ ಭೌತ ಪ್ರಪಂಚವು ಸಂಪೂರ್ಣವಾಗಿ ನಿರಾಕರಿಸಲ್ಪಡುತ್ತದೆ."[5]

ಪ್ರಾಪಂಚಿಕ ನೆಲೆಗಳ ನಿರಾಕರಣೆಯಿಂದ ಭಿನ್ನವಾಗಿರುವ ಅಲ್ಲಮನ ಅದ್ವೈತವಾದವನ್ನು ಮೊಗಸಾಲೆಯವರು 'ಘನ' ಎನ್ನುವ ಕವಿತೆಯಲ್ಲಿ ಆಧ್ಯಾತ್ಮಿಕ ಪರಿಭಾಷೆಯಲ್ಲಿ ಪ್ರಸ್ತುತಪಡಿಸಿದ್ದಾರೆ. ವಚನ ಸಾಹಿತ್ಯದ ಪರಿಭಾಷೆಯಲ್ಲಿ 'ಘನ'ವೆಂದರೆ 'ಪರವಸ್ತು' ಎಂದರ್ಥ. "ಜೀವ ಮತ್ತು ಶಿವರು ಪರವಸ್ತುವಿನ ಎರಡು ರೂಹುಗಳು ಎಂದು ತಿಳಿದವನಿಗೆ ಶಿವನ ವಿಷಯದಲ್ಲಿ ಶ್ರೇಷ್ಠನೆಂಬ ಕಲ್ಪನೆ ಇಲ್ಲ; ಜೀವನ ವಿಷಯದಲ್ಲಿ ಕನಿಷ್ಠ ಎಂಬ ಕಲ್ಪನೆ ಇಲ್ಲ"[6] ಹಾಗಾಗಿ ಘನವೆಂಬ ಪರವಸ್ತುವಿನ ಭಾವ ಹುಟ್ಟಲು

[5].ಬಸವರಾಜು ಕಲ್ಗುಡಿ. *ಅನುಭಾವ ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ*. ಪುಟ–247

[6]. ಶ್ರೀ ಸಿದ್ದೇಶ್ವರ ಸ್ವಾಮಿಗಳು. *ಅಲ್ಲಮ ಪ್ರಭುದೇವರ ವಚನ–ನಿರ್ವಚನ*. ಪುಟ–33

‘ಮಾಯೆ’ಯು ಕಳೆದು ಹೋಗಬೇಕೆನ್ನುವುದು ಅಲ್ಲಮನ ನಿಲುವು. ಇಂತಹ ಅದ್ವೈತಾನುಭೂತಿಯ ಹಿನ್ನೆಲೆಯಲ್ಲಿ ‘ಘನ’ ಎನ್ನುವ ಕವಿತೆಯನ್ನು ಅಭಿವ್ಯಕ್ತಿಸಿದ್ದಾರೆ

***“ಲಾಳಿಯಲ್ಲಿ ಹೊರಟ ಹಾಗಿದೆ ನೂಲು***
***ಈಚೆಯಿಂದ ಆಚೆಗೆ ಆಚೆಯಿಂದ ಈಚೆಗೆ***
***ಘನವನ್ನು ಹುಡುಕ ಹೊರಟಂತೆ”***[7]

ಮಗ್ಗದಿಂದ ನೆಯ್ಗೆ ಮಾಡುವಾಗ ಬಳಸುವ ‘ಲಾಳಿ’ ಎನ್ನುವ ಸಾಧನದ ಮೂಲಕ ‘ಪರವಸ್ತು’ವನ್ನು ಅರ್ಥೈಸಲು ಕವಿ ಮುಂದಾಗಿದ್ದಾರೆ. ಬಟ್ಟೆಯು ಹತ್ತಿಯಿಂದ, ನೂಲಿನಿಂದ, ನೇಕಾರನಿಂದ ತಯಾರಾದರೂ ‘ಲಾಳ’ ಸಾಧನದ ಪಾತ್ರ ಬಹಳ ಮುಖ್ಯವಾದದ್ದು. ನೂಲು ಬಟ್ಟೆಯಾಗಲು ಕೇಂದ್ರವೇ ‘ಲಾಳ’. ಪರವಸ್ತುವೆಂಬುದು ‘ಲಾಳ’ದಂತೆಯೇ ಕೇಂದ್ರವಾಗಿದ್ದುಕೊಂಡು ಅನುಭಾವವೆನ್ನುವ ಬಟ್ಟೆಯನ್ನು ಹೊಸೆಯಲು ಸಾಧನವಾಗಿದೆ. ಅಲ್ಲಮನ ಅದ್ವೈತವಾದಿ ನಿಲುವನ್ನು ಕವಿ ಘನವಸ್ತುವಿನ ಪರಿಕಲ್ಪನೆಯ ಮೂಲಕ ರೂಪಾತ್ಮಕಗೊಳಿಸಿದ್ದಾರೆ. ಅಲ್ಲಮನನ್ನು ‘ಅದ್ವಯವಾದಿ’ ಎಂದು ಕರೆದಿರುವ ನಟರಾಜ್ ಬೂದಾಳು ಅವರ ಅಭಿಪ್ರಾಯವನ್ನು ಇಲ್ಲಿ ಉಲ್ಲೇಖಿಸಬಹುದು. ಅದೇನಂದರೆ “ಇಡೀ ಜಗತ್ತು ಸಂಬಂಧಗಳ ಬೃಹತ್ ಜಾಲವಾಗಿರುವಾಗ, ಅನ್ಯತ್ವವನ್ನು ಅಥವಾ ಅನನ್ಯತ್ವವನ್ನು ಹುಡುಕುವ ಪ್ರಯತ್ನದಲ್ಲಿಯೇ ಅಂದರೆ ಎಲ್ಲವನ್ನೂ ಒಂದಾಗಿಸುವ ಅಥವಾ ಎಲ್ಲವನ್ನು ಬೇರೆ ಬೇರೆಯಾಗಿಸಿ ನೋಡುವ ಕ್ರಮದಲ್ಲಿಯೇ ಸಂಬಂಧದ ನಿರಾಕರಣೆ ಇರುತ್ತದೆ”[8] ಎಂದು ಅಲ್ಲಮನ ಅನನ್ಯತ್ವವನ್ನು ವಿಶ್ಲೇಷಿಸಿರುವ ಭೂತಾಳರ ಮಾತುಗಳು ಮೊಗಸಾಲೆ ಅವರು ‘ಲಾಳ’ದ ಬಟ್ಟೆ ನೇಯುವ ಸಾಧನ ಮೂಲಕ ನಿರೂಪಿಸಲು ಹೊರಟಿರುವ ಅಲ್ಲಮನ ನಿರಾಕರಣ ತತ್ವಗಳಿಗೆ ಅನ್ವಯವಾಗುತ್ತದೆ

ವಚನ ಸಾಹಿತ್ಯದ ವಿಶಿಷ್ಟ ಪದಕೋಶಗಳಲ್ಲಿ ಅಥವಾ ಪರಿಕಲ್ಪನೆಗಳಲ್ಲಿ ‘ಜಂಗಮ’ ಮತ್ತು ಸ್ಥಾವರಕ್ಕೆ ವಿಶೇಷ ಮಹತ್ವವಿದೆ. ‘ಜಂಗಮವೂ ಸ್ಥಾವರವೂ’ ಎನ್ನುವ ಕವಿತೆಯಲ್ಲಿ ಜಂಗಮಸ್ವರೂಪಿಯಾದ ಬುದ್ಧನ ಮೂಲಕ ಆತ್ಮದ ಅನ್ವೇಷಣೆಗೆ ಕವಿ ತೊಡಗಿದ್ದಾರೆ. ಬುದ್ಧಪ್ರತಿಮೆಯನ್ನು ‘ಇದೆಯೇ ಆತ್ಮ ಅಥವಾ ಪುನರ್ಜನ್ಮ?’[9] ಎಂದು ಪ್ರಶ್ನಿಸುವ ಕವಿಗೆ ಜಂಗಮನಾದರೂ ಬುದ್ಧ ಉತ್ತರಿಸದೆ ಮೌನಿಯಾಗುತ್ತಾನೆ. ತಮ್ಮ ಸಂಗಾತಿ ‘ಆತ್ಮವಿದೆ’ ಎನ್ನಲಾಗಿದೆ. ಆತ್ಮವಿಲ್ಲವೆಂದು ಕೂಡ ಸಾಬೀತು ಪಡಿಸಲಾಗದೆ ದ್ವಂದ್ವದಲ್ಲಿರುವ ಕವಿಗೆ ಹೊರಗೆ ಆತ್ಮದ ಎದುರು ರೂಪಕವೊಂದನ್ನು ಗೋಚರಿಸುತ್ತದೆ. ಅದೇನೆಂದರೆ

***“ಕಾಮನ ಬಿಲ್ಲು ನಿಧಾನವಾಗಿ***
***ಬೀಳುತ್ತಿತ್ತು ಒಳಗಿನ ಪ್ರತಿಮೆಯ ಮೇಲೆ***
***ಜಂಗಮವು ಸ್ಥಾವರವಾಯಿತು***
***ಎಂಬಂತೆ***
***ಒಂದು ಇನ್ನೊಂದರಲ್ಲಿ ಇದ್ದು”***[10]

---

[7]. ಮೊಗಸಾಲೆ, ನಾ. *ನೀಲ ಆಕಾಶ.* ಪುಟ–677
[8]. ನಟರಾಜ್ ಬೂದಾಳು. *ಪ್ರತ್ಯೇಕ ಬುದ್ಧ ಅಲ್ಲಮ ಪ್ರಭು.* ಪುಟ–44
[9]. ಮೊಗಸಾಲೆ, ನಾ. *ನೀಲ ಆಕಾಶ.* ಪುಟ–660
[10]. ನಾ.ಮೊಗಸಾಲೆ. *ನೀಲಆಕಾಶ.* ಪುಟ–661

ಭೌತಿಕ ಜಗತ್ತಿನ 'ಕಾಮನಬಿಲ್ಲು', ಮಾನಸಿಕ ಲೋಕದ ಅರಿವನ್ನು ಸಾಂಕೇತಿಕಗೊಳಿಸಿದೆ. ತನ್ನೊಳಗಿನ ಅರಿವನ್ನು, ತನ್ನೊಳಗಿನ ದೇವರನ್ನು ತಾನೇ ಕಂಡುಕೊಳ್ಳುವ, ಸ್ಥಾನವನ್ನೇ ಅದಲು–ಬದಲಾಗಿಸಿ ಒಂದರಲ್ಲಿ ಇನ್ನೊಂದನ್ನು ಕಾಣುವ ಅದ್ವೈತದ ಅನುಭೂತಿಯನ್ನು ಕವಿ ಮನಗಾಣಿಸುತ್ತಿದ್ದಾರೆ. ಬುದ್ಧಪ್ರಜ್ಞೆಯನ್ನು ವಚನ ಸಾಹಿತ್ಯಕ್ಕೆ ಮುಖಾಮುಖಿಯಾಗಿಸಿ 'ಪ್ರತ್ಯೇಕ ಬುದ್ಧ ಅಲ್ಲಮ'ನನ್ನು ಚಲನಶೀಲತೆಯ ಧ್ಯೋತಕವಾಗಿ ಕವಿ ನಿರೂಪಿಸಿದ್ದಾರೆ. 'ಪ್ರತ್ಯೇಕ'ವೆನ್ನುವುದೇ ವಿಶೇಷ ಗುಣದಿಂದ ಮಂದಿಯೊಳಗಿನಿಂದ ಹೊರಗುಳಿಯುವ ಒಂಟಿತನದ ಆಧ್ಯಾತ್ಮವಾಗಿದೆ. 'ಅಣ್ಣ ಬಸವಣ್ಣನಿಗೆ' ಎನ್ನುವ ಕವಿತೆಯಲಿ ಬಸವಣ್ಣನವರ ವಿಚಾರಧಾರೆಗಳನ್ನು ನಡೆ–ನುಡಿ ಸಮನ್ವಯತೆಯ ಮಾದರಿಯಲ್ಲಿ ಅಭಿವ್ಯಕ್ತಿಸಲಾಗಿದೆ. 'ಕಲ್ಲಿನೊಳಗಿನ ಪಾವಕ, ನೀರಿನೊಳಗಿನ ಬಿಂಬಗಳು ಹಿಡಿದಿಡಲು ಅಸಾಧ್ಯವೆನಿಸುವ ಹಾಗೆ ಬಸವಣ್ಣನವರ ವ್ಯಕ್ತಿತ್ವವನ್ನು ಪ್ರತಿಮಾತ್ಮಕಗೊಳಿಸಲಾಗಿದೆ. ಕಾಲವನ್ನು ದೂಷಿಸುವ ಹೊಸ ತಲೆಮಾರಿನ ಜನರ ಮೌಲ್ಯಹೀನ, ಭಾಷಾಹೀನ ನಡತೆಗಳನ್ನು ಬಸವಣ್ಣನವರ 'ಕಾಯಕ ಸಿದ್ಧಾಂತ'ವನ್ನು ಸಾಂಕೇತಿಸಿ ವಿಡಂಬಿಸಲಾಗಿದೆ.

***"ದೇಹವೇ ದೇಗುಲ ಎಂದುಕೊಂಡಿರುವ ನನ್ನಂಥವರ***
***ಕರಸ್ಥಳದಲ್ಲಿ***
***ಲಿಂಗಾಂಗಸಂಗ ಇರುವುದೇ ಆದರೆ***
***ಆದೇನು ಶರಣ***
***ಇಲ್ಲವಾದರೆ ಎಲ್ಲರಂತೆ***
***ಜೀವನ್ಮರಣ"*** [11]

ಶಾಸ್ತ್ರೀಯ ಪೂಜೆ–ಪುರಸ್ಕಾರಗಳ ಅಂಧಶ್ರದ್ಧೆಯಲ್ಲಿಯೇ ಮುಳುಗಿರುವ 'ಸ್ಥಾವರಲಿಂಗ'ದ ಪೂಜೆ ಇಷ್ಟಲಿಂಗಕ್ಕೆ ವರ್ಗಾವಣೆಗೊಳಿಸಿದವರು ಬಸವಣ್ಣನವರು. ದೇವರೇ ಇಲ್ಲವೆಂದು ಆರೋಪಿಸುವ ಬದಲು ದೇವರ ಅಸ್ತಿತ್ವವನ್ನು ಇಷ್ಟಲಿಂಗದ ಪರಿಕಲ್ಪನೆಗೆ ವರ್ಗಾಯಿಸಿದ ಬಸವಣ್ಣನವರನ್ನು ಕವಿ ಲಿಂಗಸಂಗದ ಶರಣನಾಗಿ ಚಿತ್ರಿಸಿದ್ದಾರೆ. ಸ್ಪಷ್ಟವಾದ ನೇರವಾದ ನಡೆನುಡಿಗೆ ಹೆಸರಾದ ಬಸವಣ್ಣನವರ ವ್ಯಕ್ತಿತ್ವವನ್ನು 'ಕಲ್ಲಿನೊಳಗಿನ ಪಾವಕ'ವೆಂದು ವಚನ ಪರಿಭಾಷೆಯಲ್ಲಿಯೆ ವರ್ಣಿಸಿದ್ದಾರೆ. ಮೊಗಸಾಲೆಯವರು 'ಬಸವಣ್ಣನವರನ್ನು' 'ಅಣ್ಣ ಬಸವಣ್ಣ'ನೆಂದು ಸಂಬೋಧಿಸುವ ಮೂಲಕ ತಮ್ಮ ತಲೆಮಾರಿನ ಹಿರೀಕನೆಂದು ಭಾವಿಸಿ, ತನ್ನದು ಕೂಡ ಶರಣ ಪರಂಪರೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ದೇವರ ಅಸ್ತಿತ್ವದ ಬಗೆಗೆ ಹುಟ್ಟಿಕೊಂಡಿರುವ ಆಸ್ತಿಕತೆ ಮತ್ತು ನಾಸ್ತಿಕತೆ ಎಂಬ ಸಿದ್ಧಾಂತಗಳಾಚೆಗೆ ದೇವರನ್ನು ಕರೆತಂದು ದೇಹವನ್ನೇ ದೇವಾಯಲವಾಗಿ ಇಷ್ಟಲಿಂಗದ ಪರಿಕಲ್ಪನೆಯನ್ನು ಹುಟ್ಟುಹಾಕಿದ ಬಸವಣ್ಣನವರ ನಿಲುಕು ಕವಿಯನ್ನು ಪ್ರೇರೇಪಿಸಿದೆ. ಸ್ಥಾವರಗಳ ನಿರಾಕರಣೆಯು ಕವಿಯ ಆಧ್ಯಾತ್ಮದ ನಡಿಗೆಗಳಲ್ಲಿ ಒಂದಾಗಿರುವುದಕ್ಕೆ ವಚನಸಾಹಿತ್ಯದ ನೇರ ಪ್ರಭಾವವಿದೆ.

***"ಭಾಷೆಯೆಂಬುದು ಪ್ರಾಣ ಘಾತುಕವಾಗದೆ ವಾಗರ್ಥವೇ ಆದ ಹಾಗೆ"*** [12]

---

[11]. ಅದೇ., ಪುಟ–663
[12]. ಅದೇ., ಪುಟ–663

ಮೊಗಸಾಲೆಯವರು ಬಸವಣ್ಣನವರ ವ್ಯಕ್ತಿತ್ವವನ್ನು 'ವಾಗರ್ಥದ' ಮೂಲಕ ಕಟ್ಟಿಕೊಟ್ಟಿದ್ದಾರೆ. 'ಭಾಷೆಯೆಂಬುದು ಪ್ರಾಣಘಾತುಕ'ವೆನ್ನುವ ಸಾಲು ಅಲ್ಲಮ ಮತ್ತು ಬಸವಣ್ಣನವರ ವಚನಗಳಲ್ಲಿ ವ್ಯಕ್ತವಾಗಿದೆ. ಘಾತುಕವಾದ ಭಾಷೆಗಿಂತ ವಾಗರ್ಥಕ್ಕೆ ಹೆಸರುವಾಸಿಯಾದ ವಚನಕಾರರ ನಡೆ–ನುಡಿಗಳ ಸಾಮರಸ್ಯವನ್ನು ಕವಿ ಮಾದರಿಯಾಗಿ ಸ್ವೀಕರಿಸಿದ್ದಾರೆ. "ಲೋಕ ಸಮಸ್ತವೂ ಒಗ್ಗೂಡುತ್ತ, ವಿಸರ್ಜನೆಗೊಳ್ಳುತ್ತ ಸದಾ ಬದಲಾಗುತ್ತಿದ್ದರೆ, ಭಾಷೆ ಲೋಕದ ಈ ಚಲನೆಯನ್ನು ಪರಿಗಣಿಸದೆ ಸ್ಥಿತವಾದುದನ್ನು ನುಡಿಯುವ ಪ್ರಯತ್ನ ಮಾಡುತ್ತದೆ. ಭಾಷೆಯ ಈ ನಡೆಯನ್ನು ಬದಲಾಯಿಸಲು ಅದರ ಜಾಡು ತಪ್ಪಿಸಲು ಅಲ್ಲಮ ಅದನ್ನೊಮ್ಮೆ ಈಡಾಡಿಬಿಡುತ್ತಾನೆ. ಅಂತಹ ಪ್ರಯತ್ನಗಳೇ ಬೆಡಗಿನ ವಚನಗಳು"[13] ಎಂದು ನಟರಾಜ್ ಬೂದಾಳರು ಪ್ರಾಣಘಾತುಕ ಭಾಷೆಗೆ ಬಗೆಗಿನ ಅಲ್ಲಮನ ನಿಲುವನ್ನು ವಿಶ್ಲೇಷಿಸಿದ್ದಾರೆ. 'ಮಾತೆಂಬುದು ಜ್ಯೋತಿರ್ಲಿಂಗ'ವಾಗ ಬೇಕಾದರೆ ಭಾಷೆಯು ಪ್ರಾಣಘಾತುಕವನ್ನು ಬಿಡಬೇಕೆನ್ನುವುದು ವಚನಕಾರರ ನಿಲುವು. ಈ ತತ್ವವಿವೇಚನೆಯ ಮೂಲಕ ಮೊಗಸಾಲೆಯವರು ಬಸವಣ್ಣ ಮತ್ತು ಅಲ್ಲಮನನ್ನು ಅರಿಯುವ ಪ್ರಯತ್ನವನ್ನು ಮಾಡಿದ್ದಾರೆ. 'ಪ್ರಾಣ ಘಾತುಕ' ಎನ್ನುವ ಶಬ್ಧವನ್ನು 'ಶಿವನೇ' ಎನ್ನುವ ಕವಿತೆಯಲ್ಲಿಯೂ ಕೂಡ ಮೊಗಸಾಲೆಯವರು ಪ್ರಯೋಗಿಸಿದ್ದಾರೆ. ಗಾಂಧೀಜಿಯವರು ಕಂಡಿದ್ದಂತಹ ಮೌಲ್ಯಯುತವಾದ ಕನಸುಗಳನ್ನು ನಿರೂಪಿಸಲು 'ವಚನ ಪರಿಭಾಷೆ'ಯನ್ನೇ ಬಳಸಿಕೊಂಡಿರುವುದನ್ನು ಗುರುತಿಸಲಾಗಿದೆ.

***"ಭಾಷೆ ಪ್ರಾಣಘಾತುಕವಾಗದಂಥ ಬಾಯಿ***
***ನಿಶ್ಯಬ್ಧವನ್ನು ಶಬ್ಧರೂಪದಲ್ಲಿ***
***ಕೇಳಬಾರದೆನ್ನುವ ಹಾಗೆ ಕಿವಿ***
***ಘನವನ್ನಲ್ಲದೆ ಬೇರೇನನ್ನೂ ನೋಡಬಾರದೆನ್ನುವ***
***ಕಣ್ಣುಗಳು***
***ನನ್ನ ಮುಂದಿರಬೇಕು***
***ಎಂದು ಕನಸು ಕಟ್ಟಿದ್ದರು ಗಾಂಧೀಜಿ ಪ್ರತಿಮೆಗಳಲ್ಲಿ"***[14]

ಗಾಂಧಿಯವರು ಪ್ರತಿಪಾದಿಸಿರುವ ಮೂರು ಮಂಗಗಳ ಪ್ರತಿಮೆಗಳ ಮೂಲಕ ಜೀವನ ಮೀಮಾಂಸೆಯನ್ನು ತೆರೆದಿಟ್ಟರು. ಈ ಮಂಗಗಳ ಪ್ರತಿಮೆಗಳು ಹೇಳಲು ಹೊರಟಿರುವ ತತ್ವ ಗ್ರಹಿಕೆಗಳನ್ನು 'ವಚನ ಭಾಷೆಯ' ಮೂಲಕ ಮೊಗಸಾಲೆಯವರು ಸಾದೃಶ್ಯಗೊಳಿಸಿದ್ದಾರೆ. ಬಾಯಿ, ಕಿವಿ, ಮತ್ತು ಕಣ್ಣುಗಳು ಭಾಷೆ, ನಿಶ್ಯಬ್ಧತೆ ಮತ್ತು 'ಘನ'ವನನು ಪ್ರತಿಮಾತ್ಮಕವಾಗಿ ಕಟ್ಟಿಕೊಟ್ಟಿವೆ. ಕೆಟ್ಟದನ್ನ ಮಾತನಾಡಬಾರದು ಎಂಬುದು ಪ್ರಾಣ ಘಾತುಕ ತನವನ್ನು, ಕೆಟ್ಟದನ್ನು ಕೇಳಬಾರದೆಂಬುದು ಶಬ್ಧವನ್ನು, ಕೆಟ್ಟದ್ದನ್ನು ನೋಡಬಾರದು ಎನ್ನುವುದು ಘನಕ್ಕೆ ಹೊರತಾದದ್ದು ಎಂಬುದನ್ನ ಮೊಗಸಾಲೆಯವರು ಸಮೀಕರಿಸಿ ನಿರೂಪಿಸಿದ್ದಾರೆ. 'ಬೆಡಗಿನ ಭಾಷೆಯನ್ನು ಅನುಭಾವದ ನೆಲೆಯಲ್ಲಿ ರೂಪಿಸಿಕೊಂಡ ವಚನಕಾರರ ಭಾಷಾ ವಿನ್ಯಾಸಕ್ಕೆ ಮೊಗಸಾಲೆಯವರು ಮಾರು ಹೋಗಿದ್ದಾರೆ. ಶಬ್ಧ ಚಿತ್ರಗಳು, ಚಿತ್ರಕವಿತ್ವದಂತಹ ಸೊಬಗನ್ನು

---

[13]. ನಟರಾಜ್ ಬೂದಾಳು. *ಪ್ರತ್ಯೇಕ ಬುದ್ಧ ಅಲ್ಲಮ ಪ್ರಭು.* ಪುಟ–46
[14]. ಮೊಗಸಾಲೆ, ನಾ. *ನೀಲ ಆಕಾಶ.* ಪುಟ–676

ಭಾಷೆಗೆ ಒಳಪಡಿಸಿ ಕಾವ್ಯದ ಧ್ವನಿಯನ್ನು ಆಕರ್ಷಿತಗೊಳಿಸಿದ್ದಾರೆ. ಮೊಗಸಾಲೆಯವರು ಅಲ್ಲಮನ ಲೌಕಿಕ ಬದುಕಿನ ನಿರಾಕರಣೆಯನ್ನು ಅದ್ವೈತದ ಅನುಭೂತಿಯಲ್ಲಿ ನಿರೂಪಿಸಿದ್ದಾರೆ. 'ಇಷ್ಟಲಿಂಗ', 'ಗುಹೇಶ್ವರ', 'ಶಬ್ಧ, ನಿಶ್ಯಬ್ಧ'ದ ಪರಿಕಲ್ಪನೆಗಳನ್ನು ಅನುಭಾವದ ನೆಲೆಯಲ್ಲಿ ಸಾದೃಶ್ಯಗೊಳಿಸಿ ವಚನ ಮೀಮಾಂಸೆಯನ್ನು ಕಾವ್ಯ ಮೀಮಾಂಸೆಯಾಗಿ ರೂಪಿಸುವ ಶೈಲಿಯನ್ನು ಮೊಗಸಾಲೆಯವರಲ್ಲಿ ಕಾಣಬಹುದು. ಸಕಲವನ್ನು ಒಡೆದು ನೋಡುವ, ತರ್ಕಕ್ಕೆ ಒಳಪಡಿಸುವ ವಚನಕಾರ ವೈಚಾರಿಕದೃಷ್ಟಿ, ಜೀವನದೃಷ್ಟಿಗಳು ಮೊಗಸಾಲೆಯವರನ್ನು ಮನಸೆಳೆದಿವೆ. ಈ ಹಿನ್ನೆಲೆಯಲ್ಲಿ ಅಲ್ಲಮ ಮತ್ತು ಬಸವಣ್ಣನವರ ವ್ಯಕ್ತಿತ್ವದ ಮಾದರಿಗಳನ್ನು ಕಾವ್ಯದ ಆತ್ಮಕ್ಕೆ ಒಳಪಡಿಸುತ್ತ ಆಧ್ಯಾತ್ಮದ ಅನುಸಂಧಾನಕ್ಕೆ ತೊಡಗುವ ಮಾನವಪರ ಧೋರಣೆ ಮೊಗಸಾಲೆಯವರ ಕಾವ್ಯಯಾನವನ್ನು ಪ್ರಬುದ್ಧಗೊಳಿಸಿದೆ.

**ಆಕರಗ್ರಂಥಗಳು**


- ಮೊಗಸಾಲೆ, ನಾ. (2020). ನೀಲ ಆಕಾಶ – ಸ್ನೇಹ ಎಂಟರ್‌ಪ್ರೈಸಸ್.


**ಪರಾಮರ್ಶನ ಗ್ರಂಥಗಳು**


- ಹೆಗಡೆ, ಜಿ.ಎಂ. (ಸಂ.) (2023). *ಅಲ್ಲಮ ಅಧ್ಯಯನ ಲೋಕ.* ಅಲ್ಲಮಪ್ರಭು ಪೀಠ. ಕಾಂತಾವರ ಟ್ರಸ್ಟ್.
- ನಾಗಭೂಷಣಸ್ವಾಮಿ, ಓ.ಎಲ್. (2321). *ವಚನ ಪ್ರಶ್ನೋತ್ತರ. ಚಿಂತನ ಚಿತ್ತಾರ.*
- ನಟರಾಜ ಬೂದಾಳು, ಎಸ್. (2021). ಪ್ರತ್ಯೇಕ ಬುದ್ಧ ಅಲ್ಲಮಪ್ರಭು. ಪಲ್ಲವ ಪ್ರಕಾಶನ.